† SRI AZEEZ SAIT.—There is no subsidy from Government of India.

ಶ್ರೀ ಕೆ.ಎಚ್. ಹನುಮೇಗೌಡ —ಈಗ ೨೦ ಪರ್ಸೆಂಟ್ ಸಬ್ಸಿಡಿ ಏನು ಕೊಡುತ್ತಿದ್ದಾರೆ ಅದು ರಾಜ್ಯ ಸರ್ಕಾರದವರು ಮಾತ್ರ ಕೊಡುತ್ತಿದ್ದಾರೆಂದು ಹೇಳುತ್ತೀರಾ?

ಶ್ರೀ ಅಜೀಜ್ ಸೇಠ್.—ಹೌದು, ರಾಜ್ಯ ಸರ್ಕಾರದವರು ಮಾತ್ರ ಕೊಡುತ್ತಿದ್ದಾರೆ.

ಶ್ರೀ ಕೆ.ಎಚ್. ಹನುಮೇಗೌಡ.—ಸ್ವಾಮಿ, ನನಗೆ ತಿಳಿದ ಮಟ್ಟಿಗೆ ಕೇಂದ್ರಸರ್ಕಾರದವರು ಕಳೆದ ಎರಡು ವರ್ಷಗಳಿಂದ ಈ ಗೊಬರ್ ಗ್ಯಾಸ್ ಪ್ಲಾಂಟಿಗೆ ಸಬ್ಸಿಡಿ ಹಣವನ್ನು ಕೊಡುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡಿಲ್ಲ ಎಂದು ಕೇಳಿದ್ದೇನೆ. ದಯವಿಟ್ಟು ಇದನ್ನು ವಿವರಿಸಿ ಮಾಡಿ ಹೇಳುತ್ತೀರಾ ಸ್ವಾಮಿ?

ಶ್ರೀ ಅಜೀಜ್ ಸೇಠ್.—ಕೇಂದ್ರಸರ್ಕಾರದವರು ಸಬ್ಸಿಡಿ ಯಾವುದೂ ಕೊಡುತ್ತಿಲ್ಲ ಎಂದು ನಿರ್ದಿಷ್ಟವಾಗಿ ಇದೆ.

ಶ್ರೀ ಕೆ.ಎಚ್.ಹನುಮೇಗೌಡ.—ಕಳೆದ ವರ್ಷ ಕೇಂದ್ರಸರ್ಕಾರದವರು ೫-೬ ಲಕ್ಷ ಹಣವನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದಾರೆ ಆದರೆ ರಾಜ್ಯ ಸರ್ಕಾರದವರು ಅದನ್ನು ವಿತರಣೆ ಮಾಡಿಲ್ಲ ಎಂದು ಕಮರ್ಷಿಯಲ್ ಬ್ಯಾಂಕಿನವರು ಗಲಾಟೆ ಮಾಡಿದ್ದಾರೆ. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಅಜೀಜ್ ಸೇಠ್. ನಾನು ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಇದರ ಬಗ್ಗೆ ಮಾನ್ಯ ಮಂತ್ರಿಗಳಿಗೆ ಸರಿಯಾದ ಮಾಹಿತಿ ಇಲ್ಲದೇಹೋದರೆ ಈ ಪ್ರಶ್ನೆಯನ್ನು ತಡೆಹಿಡಿದರೆ ಒಳ್ಳೆಯದಲ್ಲವೆ?

SRI AZEEZ SAIT —Sir, the hon Member wants specific answer with regard to subsidy. According to may information there is no subsidy from the Government of India. If the Chair feels that this question could be held over, I have no objection for that. I will furnish detailed information to the hon. Member.

Consultative Committees

780 SRI P. RAMDEV (Malleswaram).—Will the Minister for Agriculture and Parliamentary affairs be pleased to state —

(a) whether the Government has constituted a Consultative Committees for all the Departments of Government during the year 1978;

(b) if so, whether the details of the Consultative Committees and list of members will be placed on the table of the House;

(c) whether the members of this House were consulted in constituting these Committees?

SRI K.H. RANGANATH(Minister for Agriculture and Parlaimentary Affairs).—

(a) The Consultative Committees have been constituted in respect of 30 subjects in 1978 and in respect of 4 subjects in 1979.

(b) The list of members mentioned above is placed on the table of the House. **

(c) Yes.

ಶ್ರೀ ಪಿ. ರಾಮದೇವ್.—ಸ್ವಾಮಿ ಸಲಹಾ ಸಮಿತಿಗಳ ರಚನೆಯ ಉದ್ದೇಶವೇನು ಎಂಬುದನ್ನು ವಿವರಿಸುತ್ತೀರಾ?

† ಶ್ರೀ ಕೆ.ಎಚ್. ರಂಗನಾಥ್.—ಸರ್ಕಾರಿ ಆಜ್ಞೆಯಲ್ಲಿ ಆ ಉದ್ದೇಶವನ್ನು ಹಾಕಲಾಗಿದೆ.

ಶ್ರೀ ಪಿ. ರಾಂದೇವ್ —ಸರ್ಕಾರಿ ಆಜ್ಞೆಯಲ್ಲಿರತಕ್ಕ ಉದ್ದೇಶಗಳು ಸಫಲ ಆಗದೇ ಇರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕೆ. ಎಚ್. ರಂಗನಾಥ್.—ಕೂಸು ಹೊನ್ನೆತಾನೇ ಹುಟ್ಟಿದೆ. ಎಂದರೆ ಹೊನ್ನೆತಾನೇ ಹೋದ ಅಧಿವೇಶನ ಕಾಲದಲ್ಲಿ ಈ ಸಲಹಾ ಸಮಿತಿಗಳನ್ನು ರಚನೆ ಮಾಡಬೇಕು ಎಂದು ತೀರ್ಮಾನ ತೆಗೆದುಕೊಂಡೆವು. ಆದರ ಪ್ರಕಾರ ಅದನ್ನು ಮಾಡಿಯಾಗಿದೆ. ಕೆಲವು ಕಮಿಟಿಗಳು ಸಭೆ ಸೇರಿ ಕಾರ್ಯ ಕಲಾಪಗಳನ್ನು ಮಾಡಿವೆ. ಕೆಲವು ಇಲಾಖೆಗಳು ಮಾಡಿವೆಯೋ ಇಲ್ಲವೋ ಗೊತ್ತಿಲ್ಲ. ಆ ಸಮಿತಿಗಳ ಉದ್ದೇಶ ಸಫಲವಾಗುತ್ತದೆನ್ನುವ ಭರವಸೆಯನ್ನು ನಾನು ಕೋಡುತ್ತೇನೆ.

ಶ್ರೀ ಪಿ. ರಾಂದೇವ್.—ಮಾನ್ಯ ಸದಸ್ಯರು ಬಹಳ ಆಶಾದಾಯಕವಾಗಿದ್ದಾರೆ. ಸಂತೋಷ. ಅನೇಕ ಸಮಿತಿಗಳನ್ನು ಏನು ಒಂದು ಉದ್ದೇಶದಿಂದ ರಚನೆ ಮಾಡಿದ್ದಾರೆ ಅವು ಆ ಕೆಲಸವನ್ನು ಮಾಡುವುದಕ್ಕೆ ಆಗಿಲ್ಲ. ಅವು ಸಭೆಗಳನ್ನು ಕರೆಯುತ್ತಿಲ್ಲ. ಹಾಗಾದರೆ ಕೆಲಸ ಹೇಗೆ ಆಗಬೇಕು? ಈ ಮನೆಯ ಕೆಲಸವನ್ನು ಕಡಿಮೆ ಮಾಡುವ ಸಲುವಾಗಿ ಸಲಹಾ ಸಮಿತಿಯನ್ನು ನೇಮಕ ಮಾಡಿದ್ದಾರೆ. ಆದರೆ ಅದು ಆಗುತ್ತಿಲ್ಲ. ಆದ್ದರಿಂದ ಆ ಸಮಿತಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡುವಹಾಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ.ಎಚ್. ರಂಗನಾಥ್.—ಸಭೆಯನ್ನು ಕರೆಯಬೇಕೆಂದು ಸರ್ಕಾರಿ ಆಜ್ಞೆಯಲ್ಲಿದೆ. ಬಹಳ ಮಟ್ಟಿಗೆ ಈ ಸಭೆಯಲ್ಲಿ ಕಾರ್ಯಕಲಾಪಗಳು ನಡೆಯುವ ಸಮಯದಲ್ಲಿ ಆ ಸಲಹಾ ಸಮಿತಿಯ ಸಭೆಯನ್ನು ಕರೆಯಬಾರದು ಎಂದು ಇದೆ. ಈ ಸಭೆ ಇಲ್ಲದೇ ಇರುವ ಕಾಲದಲ್ಲಿ ಆ ಸಮಿತಿಗಳು ಸಭೆಯನು ಕರೆದರೆ ಹೆಚ್ಚು ಕೆಲಸವಾಗುತ್ತದೆ. ಆದ್ದರಿಂದ ಕಾರ್ಯಕಲಾಪಗಳು ನಡೆಯುವ ರೀತಿಯಲ್ಲಿ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರದವರು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಾರೆ.

ಶ್ರೀ ಜಿ. ಬಿ. ಶಂಕರರಾವ್.—ಈ ಸಲಹಾ ಸಮಿತಿಗಳನ್ನು ಈ ಸಭೆಯ ಕಾಲದಲ್ಲಿ ಕರೆಯಬೇಕು ಎಂದು ಸರ್ಕಾರಿ ಆಜ್ಞೆಯಲ್ಲಿದೆ. ವಿಶೇಷವಾಗಿ ಬಜೆಟ್ ಅಧಿವೇಶನ ನಡೆದ ಕಾಲದಲ್ಲಿ ಮತ್ತು ಅದಕ್ಕೆ ಪೂರ್ವದಲ್ಲಿ ಕರೆದರೆ ಸರ್ಕಾರಕ್ಕೆ ಒಂದು ರೀತಿಯಿಂದ ಬೇರೆ ಬೇರೆ ಇಲಾಖೆಗಳಿಗೆ ನುರಿತಂಥ ಅನುಭವಿಕ ಸದಸ್ಯರಿಂದ ಸಲಹೆಗಳನ್ನು ಪಡೆಯುವುದಕ್ಕೆ ಅನುಕೂಲವಾಗುತ್ತದೆ, ಆದ್ದರಿಂದ ಸಭೆ ಸೇರಿದಾಗಲೇ ಕರೆಯಬೇಕು ಎಂದು ಇರುವುದು ಸಲಹಾಸಮಿತಿಗಳನ್ನು ಬೇರೆ ಕಾಲದಲ್ಲಿ ಕರೆದರೆ ಅನಾವಶ್ಯಕವಾದಂಥ ಖರ್ಚುಬರುತ್ತದೆ. ಬೇಡಿಕೆಗಳ ಮೇಲೆ ಚರ್ಚೆ ಯಾಗತಕ್ಕ ಕಾಲದಲ್ಲಿ ಕರೆದರೆ ಹೆಚ್ಚಿಗೆ ಪ್ರಯೋಜನ ವಾಗುತ್ತದೆ ಎಂದು ಸಲಹಾಸಮಿತಿಗಳನ್ನು ನೇಮಿಸಿರುವುದು. ಆದುದರಿಂದ ಸಭೆ ನಡೆಯುವಾಗಲೇ ಕರೆಯುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.—ಅದು ಅಭಿಪ್ರಾಯದ ಮಾತು. ಪ್ರಜಾಪ್ರಭುತ್ವ ಎಂದು ಹೇಳಿದರೆ ಸ್ವಲ್ಪ ಖರ್ಚು ಆಗೇ ಆಗುತ್ತದೆ, ಖರ್ಚಿಗೋಸ್ಕರ ಹೆದರಿದರೆ ಕೆಲಸ ಆಗುವುದಿಲ್ಲ. ಸಭೆಯು ನಡೆಯುವಂಥ ಕಾಲದಲ್ಲಿ ಕರೆಯುವುದಕ್ಕಿಂತ, ಸಭೆ ಇಲ್ಲದೇ ಇರತಕ್ಕ ಸಮಯದಲ್ಲಿ ಕರೆದರೆ ಆಡಳಿತದ ಬಗ್ಗೆ ಪ್ರಸ್ತಾಪಮಾಡಲಿಕ್ಕೆ, ಪಾಲಿಸಿ ಮ್ಯಾಟರ್ ಬಗ್ಗೆ ಪ್ರಸ್ತಾಪಮಾಡಲಿಕ್ಕೆ, ಸದನದ ಸದಸ್ಯರು ಆದರ ಜೊತೆಗೆ ಹೆಚ್ಚು ಸಂಪರ್ಕವನ್ನಿಟ್ಟುಕೊಳ್ಳುವುದಕ್ಕೆ ಸಹಾಯವಾಗುತ್ತದೆ ಎನ್ನುವುದು ಸರ್ಕಾರದ ಉದ್ದೇಶವಾಗಿರುವುದರಿಂದ ಆ ಕಾಲದಲ್ಲಿ ಕರೆಯುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

**Copy placed in the Karnataka Legislature library vide No. 32 dated 15th May 1979.

ಶ್ರೀ ಜಿ.ಬಿ. ಶಂಕರರಾವ್.—ಬಡ್ಜೆಟ್ ಅಧಿವೇಶನಕ್ಕೆ ಮುಂಚಿತವಾಗಿ ಸಲಹಾ ಸಮಿತಿಗಳನ್ನು ಕರೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ ಎಚ್. ರಂಗನಾಥ್.—ಆಯಾ ಮಂತ್ರಿಗಳು ಕಾಲವನ್ನು ನೋಡಿಕೊಂಡು ಕರೆಯುತ್ತಾರೆ. ನಾನು ಇಂಥಾ ಕಾಲದಲ್ಲೇ ಕರೆಯಬೇಕು ಎಂದು ಹೇಳತಕ್ಕಂಥಾದ್ದು ಸರಿ ಕಾಣುವುದಿಲ್ಲ. ಅನುಕೂಲ ವನ್ನು ನೋಡಿಕೊಂಡು ಆ ಇಲಾಖೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಕರೆಯುತ್ತಾರೆ.

Funds sanctioned for Public Works Division, Hassan

969 SRI B.H. LAKSHMANAIAH (Belur).—Will the Minister for Public Works be pleased to state:—

the total amount sanctioned for Public Works Division, Hassan for the last Five Years and distribution of funds made to each sub-Division under Roads, Bridges, and Buildings?

SRI S. BANGARAPPA (Minister for Public Works).—

5 Statements showing the total amount sanctioned and the Sub-Division-wise grant for the last 5 years from 1974-75 to 1978-79 is placed on the Table.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ.—ಮಂತ್ರಿಗಳು ಒದಗಿಸಿರತಕ್ಕಂಥ ೫ ವರ್ಷದ ಹಣದ ಹಂಚಿಕೆಯನ್ನು ನೋಡಿದರೆ ಹಾಸನ ಸಬ್ ಡಿವಿಜನ್‌ಗೆ ಪಿ.ಡಬ್ಲ್ಯು.ಡಿ. ಕೆಲಸಗಳಿಗಾಗಿ ತಾವು ಲಕ್ಷಗಟ್ಟಲೆ ಕೊಟ್ಟಿದ್ದೀರಿ. ಬೇರೆ ಬೇರೆ ಸಬ್ ಡಿವಿಜನ್‌ಗಳಿಗೆ ಸಾವಿರಗಟ್ಟಲೆ ಕೊಟ್ಟಿದ್ದೀರಿ ಇದಕ್ಕೆ ಕಾರಣವೇನು ?

† ಶ್ರೀ ಎಸ್. ಬಂಗಾರಪ್ಪ.—ಯಾವ ಯಾವ ಸಬ್ ಡಿವಿಜನ್‌ನಲ್ಲಿ ಏನೇನು ಕೆಲಸಗಳನ್ನ ತೆಗೆದು ಕೊಳ್ಳಬೇಕು ಎಂದು ಆಯ್ಕೆಗೆ ಅನುಗುಣವಾಗಿ ಕೆಲಸಕಾರ್ಯಗಳು ಮುಂಜೂರಾಗಿರುತ್ತವೆ. ಆದುದರಿಂದ ಸಹಜವಾಗಿ ಒಂದು ಕಡೆಯಲ್ಲಿ ಜಾಸ್ತಿ ಇರುತ್ತದೆ, ಒಂದು ಕಡೆಯಲ್ಲಿ ಕಡಿಮೆ ಇರುತ್ತದೆ, ಸರಿಸಮಾನ ವಾಗಿ ಹೋಗಬೇಕು ಎಂಬ ಉದ್ದೇಶವಿದ್ದರೂ ಕೂಡ ಉದಾಹರಣೆಗೆ ಹೇಳುವುದಾದರೆ, ನದಿ ಒಂದು ಸಬ್ ಡಿವಿಜನ್‌ನಲ್ಲಿ ಹರಿಯುತ್ತದೆ, ಅಲ್ಲಿ ಸಹಜವಾಗಿ ಜಾಸ್ತಿ ಖರ್ಚಾಗುತ್ತದೆ, ಪಕ್ಕದ ಡಿವಿಜನ್‌ನಲ್ಲಿ ಕಡಿಮೆಯಾಗುತ್ತದೆ.

ಶ್ರೀ ಬಿ.ಎಚ್. ಲಕ್ಷ್ಮಣಯ್ಯ.—ಅದು ಒಂದು ವರ್ಷಕ್ಕಾದರೆ ತಾವು ಹೇಳಿದ ಮಾತನ್ನು ಒಪ್ಪಿ ಕೊಳ್ಳಬೇಕಾಗುತ್ತದೆ. ಆದರೆ ತಾವು ೫ ವರ್ಷಗಳಿಗೆ ಹಣವನ್ನು ಹಂಚಿದ್ದೀರಿ. ಪ್ರತಿವರ್ಷ ಹಾಸನ ಸಬ್ ಡಿವಿಜನ್‌ನಲ್ಲಿ ಕೆಲಸ ಜಾಸ್ತಿ ಇರುತ್ತದೆ, ಹಾಸನ ತಾಲ್ಲೂಕು ಬೇರೆ ತಾಲ್ಲೂಕುಗಳಿಗಿಂತ ದೊಡ್ಡ ತಾಲ್ಲೂಕು. ಇದನ್ನು ಏಕೆ ನಿರ್ಲಕ್ಷ್ಯ ಮಾಡಿದ್ದೀರಿ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಹೇಳತಕ್ಕ ವಿಷಯದಲ್ಲಿ ನನಗೆ ಸತ್ಯ ಸ್ವಲ್ಪ ಕಾಣುತ್ತದೆ, ಇಲ್ಲ ಎಂದಲ್ಲ. ಈಗ ತಾಲ್ಲೂಕಿನ ವಿಸ್ತರಣದ ದೃಷ್ಟಿಯಿಂದ ಕೆಲವೊಮ್ಮೆ ಸಣ್ಣ ತಾಲ್ಲೂಕಿನಲ್ಲಿ ಜಾಸ್ತಿ ಖರ್ಚಾಗಿ, ದೊಡ್ಡ ತಾಲ್ಲೂಕಿನಲ್ಲಿ ಕಡಿಮೆ ಖರ್ಚಾಗುವುದು ಉಂಟು. ಆದು ಸಣ್ಣ ತಾಲ್ಲೂಕು ಆದರೂ ಕೂಡ ಖರ್ಚು ಜಾಸ್ತಿ ಬರುತ್ತದೆ ದೊಡ್ಡ ತಾಲ್ಲೂಕಿಗೆ ಕಡಿಮೆ ಖರ್ಚು ಬರುತ್ತದೆ. ಕೆಲವು ಕಡೆ ನಿರ್ಲಕ್ಷ್ಯ ತೋರಿಸುತ್ತೀರಿ ಎಂದು ಮಾನ್ಯ ಸದಸ್ಯರು ಹೇಳಿದರು. ನಿರ್ಲಕ್ಷ್ಯ ಎನ್ನುವ ಮಾತನ್ನು ನಾನು ಹೇಳದೇ ಇದ್ದರೂ ಕೂಡ ಕೆಲವು ಕಡೆಗಳಲ್ಲಿ ಕಡಿಮೆ ಖರ್ಚಾಗಿದೆ ಕೆಲಸಕಾರ್ಯಗಳು ಕಡಿಮೆ ಯಾಗಿದೆ ಎನ್ನುವುದು ಸತ್ಯ. ಆದಷ್ಟು ಜಾಸ್ತಿ ತೆಗೆದುಕೊಳ್ಳಬೇಕು ಎನ್ನುವ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ. ಈಗ ಮಾಸ್ಟರ್ ಪ್ಲಾನ್ ಸಿದ್ಧಮಾಡಿಟ್ಟುಕೊಂಡಿದ್ದೇವೆ. ಮುಂದೆ ಹಣದ ಲಭ್ಯತೆ ಯನ್ನನುಸರಿಸಿ ಜಾಸ್ತಿ ತೆಗೆದುಕೊಂಡು ಹೋಗತಕ್ಕೆ ಪ್ರಯತ್ನ ಮಾಡುತ್ತೇವೆ.